2002ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಜೂಲನ್ ಅವರು ಕಳೆದ 15 ವರ್ಷಗಳಿಂದ ಭಾರತ ತಂಡಕ್ಕಾಗಿ ತಮ್ಮ ಸಾಮರ್ಥ್ಯವನ್ನು ಧಾರೆಯೆರೆಯುತ್ತಿದ್ದಾರೆ.

ಕೋಲ್ಕತ್ತದಿಂದ ಸುಮಾರು 80 ಕಿಲೋಮೀಟರ್ ದೂರದ ಊರಿನಲ್ಲಿ 1982ರಲ್ಲಿ ಜೂಲನ್ ಜನಿಸಿದರು. ಅವರ ತಂದೆ ವಾಯುಪಡೆಯಲ್ಲಿ ಉದ್ಯೋಗಿಯಾಗಿದ್ದರು. ಅವರ ಮೂವರು ಪುತ್ರಿಯರಲ್ಲಿ ಜೂಲನ್ ದೊಡ್ಡವರು.

ತನ್ನ ಸಹೋದರಿಯರೊಂದಿಗೆ ವಾಲಿಬಾಲ್, ಫುಟ್‌ಬಾಲ್ ಆಡುತ್ತಿದ್ದರು. ಎಂಟನೇ ವಯಸ್ಸಿನಲ್ಲಿದ್ದಾಗ ತಮ್ಮ ಮುಂದೆ ಕ್ರಿಕೆಟ್ ಆಡುತ್ತಿದ್ದ ಹುಡುಗ–ರೊಂದಿಗೆ ತಾವು ಸೇರಿಕೊಂಡರು. ಟೆನಿಸ್‌ಬಾಲ್ ಬೌಲಿಂಗ್ ಮಾಡುವಾಗ ಅತಿ ನಿಧಾನವಾಗಿ ಅವರು ಎಸೆತಗಳನ್ನು ಹಾಕುತ್ತಿದ್ದರು. 'ಕ್ರಿಕೆಟ್ ಹುಡುಗಿ–ಯರಿಗಲ್ಲ ಹೋಗು' ಎನ್ನುವ ಅಪಹಾಸ್ಯಗಳಿಗೆ ತುತ್ತಾಗಿದ್ದರು. ಆ ಮಾತುಗಳೇ ಜೂಲನ್ ಮನದಲ್ಲಿ ಛಲದ ಬೀಜ ಬಿತ್ತಿದ್ದವು. ಮನರಂಜನೆಗಾಗಿ ಆಡುತ್ತಿದ್ದ ಆಟವನ್ನು ಗಂಭೀರವಾಗಿ ಪರಿಗಣಿಸಿದರು.

ಚೆಂಡನ್ನು ಜೋರಾಗಿ ಎಸೆಯುವ ಅಭ್ಯಾಸವನ್ನು ಏಕಾಂಗಿಯಾಗಿ ಮಾಡಿದರು. ಇದನ್ನು ಗಮನಿಸಿದ ತಂದೆ–ತಾಯಿ ದಿಗಿಲುಗೊಂಡರು. 'ಕ್ರಿಕೆಟ್‌ನಲ್ಲಿ ಭವಿಷ್ಯ ಇಲ್ಲ. ಓದು–ಬರಹ ಮಾಡಿ ಉದ್ಯೋಗ ಹಿಡಿದು ಜೀವನ ರೂಪಿಸಿಕೊ' ಎಂದು ಬುದ್ಧಿವಾದ ಹೇಳಿದರು. ಅದಕ್ಕೆ ಬಗ್ಗದ ಜೂಲನ್ ಅವರಿಗೆ ಗದರಿಸುವ ಯತ್ನ ಮಾಡಿದ್ದರು. ಆದರೆ ಅದಾವುದಕ್ಕೂ ಜಗ್ಗದ ಜುಲನ್ ಬೆಳೆದರು. ರೈಲ್ವೆ ಇಲಾಖೆಯ ಉದ್ಯೋಗಿಯಾಗಿರುವ ಜೂಲನ್ ಅವರೀಗ ಕೋಲ್ಕತ್ತದ ಗಣ್ಯರಲ್ಲೊಬ್ಬರಾಗಿದ್ದಾರೆ. ತಂದೆ–ತಾಯಿಯೂ ಹೆಮ್ಮೆಯಿಂದ ತಮ್ಮ ಮಗಳ ಕುರಿತು ಮಾತನಾಡುತ್ತಾರೆ.

### ಭಾವಿ ನಾಯಕಿ ಹರ್ಮನ್

'ಹರ್ಮನ್ ಬಗ್ಗೆ ನಾನು ಹೆಮ್ಮೆ ಪಡುತ್ತೇನೆ. ಆ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ಆಕೆ ದೇಶಕ್ಕೆ ದೇಶವೇ ಹೆಮ್ಮೆ ಪಡುವಂತೆ ಮಾಡಿದ್ದಾಳೆ. ಬೆರಳುಗಳಿಗೆ ಗಾಯ–ವಾಗಿದ್ದರಿಂದ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಆಕೆ ಆಟವಾಡಿರಲಿಲ್ಲ. ಇದ–ರಿಂದಾಗಿ ಆಕೆ ಹತಾಶೆ–ಯಿಂದಿದ್ದಳು. ಇವತ್ತು ಆಕೆಗೆ ಸಮಾಧಾನವಾಗಿದೆ. ದೇವರ ಆಶೀರ್ವಾದ ನನ್ನ ಮಗಳ ಮೇಲಿದೆ'–




ಹರ್ಮನ್

ಹೋದ ಜುಲೈನಲ್ಲಿ ವಿಶ್ವಕಪ್ ಟೂರ್ನಿಯಲ್ಲಿ ಹರ್ಮನ್‌ಪ್ರೀತ್ 90 ಎಸೆತಗಳಲ್ಲಿ ಶತಕ ಬಾರಿಸಿದ್ದಾಗ ಅವರ ತಂದೆ ಹರ್ಮಿಂದರ್ ಸಿಂಗ್ ಭುಲ್ಲರ್ ಖುಷಿಪಟ್ಟಿದ್ದು ಹೀಗೆ. ಅವರ ತಾಯಿ ಮಾತುಗಳೇ ಬರದೇ ಮೂಕರಾಗಿದ್ದರು.

ಬಾಲ್ಯದಲ್ಲಿ ಹರ್ಮನ್ ಹುಡುಗರೊಂದಿಗೆ ಕ್ರಿಕೆಟ್ ಆಡುವಾಗ ಆಕ್ಷೇಪಿಸಿದ್ದ ಊರಿನ ಜನರೆಲ್ಲ ಅವತ್ತು ಟಿವಿ ಮುಂದೆ ಕುಳಿತಿದ್ದರು. ಹರ್ಮನ್ ಆಟವನ್ನು ಕಣ್ತುಂಬಿಕೊಂಡಿದ್ದರು. 'ನಮ್ಮೂರಿನ ಪೋರಿ' ಎಂದು ಗರ್ಜಿಸಿದ್ದ ಸರ್ದಾರ್ಜಿ–ಗಳು ಮೀಸೆ ತಿರುವಿದ್ದರು.

ಅವರ ಈ ಸಾಧನೆಯಿಂದ ಊರಿನ ಮತ್ತಷ್ಟು ಹುಡುಗಿಯರು ಕ್ರಿಕೆಟ್ ಆಡಲು ಆರಂಭಿಸಿದ್ದಾರೆ. ಹರ್ಮನ್ ಅವರು ಕ್ರಿಕೆಟ್ ಮೂರು ಮಾದರಿ–ಗಳಿಗೂ ಸೂಕ್ತವಾಗಬಲ್ಲ ಆಟಗಾರ್ತಿಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಭಾರತ ತಂಡದ ನಾಯಕಿಯಾಗುವ ಲಕ್ಷಣಗಳೂ ಅವರಲ್ಲಿವೆ.

## ಕನ್ನಡತಿಯರ ಕಮಾಲ್

ವಿಜಯಪುರದ ರಾಜೇಶ್ವರಿ ಗಾಯಕವಾಡ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ವೇದಾ ಕೃಷ್ಣಮೂರ್ತಿ ಅವರು ಮಧ್ಯಮ ವರ್ಗದ ಕುಟುಂಬದಿಂದ ಬಂದವರು.

ರಾಜೇಶ್ವರಿ ಮತ್ತು ಅವರ ಸಹೋದರಿ ರಾಮೇಶ್ವರಿ ವಿಜಯಪುರದಲ್ಲಿ ಕ್ರಿಕೆಟ್ ಆಡುವ ಮುನ್ನ ಅಥ್ಲೀಟ್‌ಗಳಾಗಿದ್ದರು. ಉತ್ತಮ ಜಾವೆಲಿನ್ ಥ್ರೋ ಪಟುಗಳಾಗಿದ್ದ ಅವರು ಆಕಸ್ಮಿಕವಾಗಿ ಕ್ರಿಕೆಟ್‌ಗೆ ಕಾಲಿಟ್ಟಿದ್ದರು. ರಾಜೇಶ್ವರಿ ಅವರು ಎಡಗೈ ಸ್ಪಿನ್ನರ್ ಆಗಿ ಭಾರತ ತಂಡದಲ್ಲಿ ಸ್ಥಾನ ಗಟ್ಟಿ ಮಾಡಿಕೊಳ್ಳಲು ಸಾಕಷ್ಟು ಶ್ರಮಪಟ್ಟಿದ್ದಾರೆ. ದೂರದ ವಿಜಯಪುರದಿಂದ ಬೆಂಗಳೂರಿಗೆ ಬಂದು ಕ್ಲಬ್ ಮತ್ತು ರಾಜ್ಯ ತಂಡಗಳಿಗೆ ಆಡಿದ್ದಾರೆ. ಇಂಗ್ಲೆಂಡ್‌ನಲ್ಲಿ ಜುಲೈ ವಿಶ್ವಕಪ್ ಟೂರ್ನಿಯ ಮಹತ್ವದ ಪಂದ್ಯದಲ್ಲಿ ಸಿಕ್ಕ ಏಕೈಕ ಅವಕಾಶವನ್ನು ಬಳಸಿಕೊಂಡ ಅವರು ಖ್ಯಾತಿಯ ಉತ್ತುಂಗಕ್ಕೇರಿದರು.

ವೇದಾ ಕೃಷ್ಣಮೂರ್ತಿ ಕೂಡ ಕಡೂರಿನಂತಹ ಚಿಕ್ಕ ಊರಿನಲ್ಲಿ ಮೂಲಸೌಲಭ್ಯಗಳ ಕೊರತೆ ಇದ್ದರೂ ಉತ್ತಮ ಬ್ಯಾಟ್ಸ್‌ಮನ್ ಆಗಿ ರೂಪುಗೊಂಡರು. ಅವರ ತಂದೆ ಮತ್ತು ತಾಯಿಯ ಬೆಂಬಲ ಅವರಿಗೆ ಇತ್ತು. ಅವರೂ ಈಗ ರೈಲ್ವೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕ್ರಿಕೆಟ್ ಕೋಟಾದಲ್ಲಿ ಲಭಿಸಿದ ಉದ್ಯೋಗವು ರಾಜೇಶ್ವರಿ ಮತ್ತು ವೇದಾ ಅವರ ಜೀವನಕ್ಕೆ ಹೊಸ ಉಲ್ಲಾಸ ತುಂಬಿದೆ.



ರಾಜೇಶ್ವರಿ ಗಾಯಕವಾಡ್